**C**

**SL. No. : T**

ಒಟ್ಟು ಪ್ರಶ್ನೆಗಳ ಸಂಖ್ಯೆ : 57 ]
Total No. of Questions : 57 ]

**CCE PR**
**REVISED**

[ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 8
[ Total No. of Printed Pages : 8

**ಸಂಕೇತ ಸಂಖ್ಯೆ : 33-K**

**Code No. : 33-K**

# ವಿಷಯ : ದ್ವಿತೀಯ ಭಾಷೆ — ಕನ್ನಡ

# Subject : Second Language — KANNADA

**(ಹೊಸ ಪಠ್ಯಕ್ರಮ / New Syllabus)**

**(ಪುನರಾವರ್ತಿತ ಖಾಸಗಿ ಅಭ್ಯರ್ಥಿ / Private Repeater)**

ದಿನಾಂಕ : 27. 06. 2019 ] [ Date : 27. 06. 2019

ಸಮಯ : ಬೆಳಗ್ಗೆ 9-30 ರಿಂದ ಮಧ್ಯಾಹ್ನ 12-15 ರವರೆಗೆ ] [ Time : 9-30 A.M. to 12-15 P.M.

ಗರಿಷ್ಠ ಅಂಕಗಳು : 100 ] [ Max. Marks : 100

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

1. ಈ ಪ್ರಶ್ನೆಪತ್ರಿಕೆಯು 57 ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳನ್ನು ಹೊಂದಿದೆ.

2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.

3. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.

4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.

5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

ಇಲ್ಲಿ ಕತ್ತರಿಸಿ

TEAR HERE TO OPEN THE QUESTION PAPER
ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ

Tear here

## ವಿಭಾಗ – 'ಎ'

### ಪಠ್ಯಗಳ ಅಧ್ಯಯನ (ಗದ್ಯ, ಪದ್ಯ, ಪೂರಕ ಅಧ್ಯಯನ)

**ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ :** $14 \times 1 = 14$

1. ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಯವರು ಏನೆಂದು ಖ್ಯಾತರಾಗಿದ್ದಾರೆ ?
2. ದೇಶದ ಉದ್ಧಾರ ಯಾರು ಯಾರನ್ನು ಅವಲಂಬಿಸಿದೆ ಎಂದು ಲೇಖಕರು ಹೇಳಿದ್ದಾರೆ ?
3. ಸಸ್ತನಿಗಳ ಆಶ್ರಯದಾಣಗಳು ಯಾವುವು ?
4. ವಿದ್ಯಾರ್ಥಿಗಳು ಕಾಫೀ ಕುಡಿಯಲು ಎಂತಹ ಕಪ್ಪುಗಳನ್ನು ಆರಿಸಿಕೊಂಡರು ?
5. ಲಂಡನ್ ವಿಶ್ವವಿದ್ಯಾಲಯದ ಮುಂದೆ ಗಾಂಧೀಜಿಯವರ ಪ್ರತಿಮೆಯನ್ನು ಏಕೆ ಸ್ಥಾಪಿಸಲಾಗಿದೆ ?
6. ಗೋಪಾಲನಿಗೆ ಬಣ್ಣ ಬಣ್ಣದ ಹೂಗಳು ಹೇಗೆ ಕಾಣಿಸುತ್ತಿದ್ದವು ?
7. ಗೋಪಾಲನು ಶಾಲೆಯಿಂದ ಮರಳುವಾಗ ಏಕೆ ಭಯಪಡುತ್ತಿದ್ದನು ?
8. ಗೋಪಾಲನ ಗೆಳೆಯರ ಹೆಸರೇನು ?
9. ಏಣಿಗೆ ಬೀಳುವ ಭಯವಿಲ್ಲ ಏಕೆ ?
10. ಸಿದ್ಧಾರ್ಥನು ಕಾಡಿನಿಂದ ನಾಡಿನತ್ತ ಏಕೆ ಹೊರಟನು ?
11. ಯುಗಾದಿಯ ಸಂದರ್ಭದಲ್ಲಿ ನೆಲದಮ್ಮ ಹೇಗೆ ಸಿಂಗಾರಗೊಳ್ಳುತ್ತಾಳೆ ?
12. ತಿಮಿರಕ್ಕೆ ವೈರಿ ಯಾವುದು ?
13. ಅಡಿಗರು ಹಗಲಿರುಳು ಯಾವುದಕ್ಕಾಗಿ ಹೋರಾಡಬೇಕೆಂದು ಹೇಳಿದ್ದಾರೆ ?
14. ಕುಣಿಗಲ್ ಕೆರೆ ಯಾವ ದಿಕ್ಕಿನಲ್ಲಿದೆ ?

**ಈ ಕೆಳಗಿನ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ :** $15 \times 2 = 30$

15. ಪುಟ್ಟರಾಜರ ವೇಷಭೂಷಣಗಳು ಹೇಗಿದ್ದವು ?
16. ಹಕ್ಕಿಗಳು ಗೂಡುಗಳನ್ನು ಯಾವ ರೀತಿಯಲ್ಲಿ ಅಲಂಕರಿಸುತ್ತವೆ ?
17. ಹಕ್ಕಿಗಳು ಗೂಡನ್ನು ನಿರ್ಮಿಸುವ ಉದ್ದೇಶವೇನು ?
18. ಹಿರಿಯ ವಿದ್ಯಾರ್ಥಿಗಳು ಹೆಡ್ ಮಾಸ್ತರರ ಬಳಿ ಯಾವ ವಿಚಾರಗಳನ್ನು ಹೇಳಿಕೊಳ್ಳುತ್ತಿದ್ದರು ?
19. ಥೇಮ್ಸ್ ನದಿಯ ಉತ್ತರ ಹಾಗೂ ದಕ್ಷಿಣಕ್ಕೆ ಯಾವ ವರ್ಗದ ಜನರು ವಾಸಿಸುತ್ತಾರೆ ?
20. ಟವರ್ ಆಫ್ ಲಂಡನ್‌ನ್ನು ನಿಗೂಢ ಸ್ಥಳ ಎಂದು ಏಕೆ ಕರೆಯುತ್ತಾರೆ ?
21. ಬನದ ಗೋಪಾಲನ ವೇಷಭೂಷಣಗಳು ಹೇಗಿದ್ದವು ?
22. ಮೇಲೇರಿದವರಿಗೆ ಏಣಿಯ ಮಹತ್ವ ಯಾವಾಗ ಅರಿವಾಗುತ್ತದೆ ?

23. ಚೈತ್ರದಲ್ಲಿ ನೆಲ ಮುಗಿಲ ವಾಲಗ ನಡೆದಂತೆ ಭಾಸವಾಗುತ್ತದೆ ಏಕೆ ?

24. ಕರ್ಪೂರ ತನ್ನ ಕೆಲಸವನ್ನು ಹೇಗೆ ಪೂರೈಸುತ್ತದೆ ?

25. ತುಂಬಿದ ಕುಣಿಗಲ್ ಕೆರೆ ನೋಡುಗರಿಗೆ ಹೇಗೆ ಕಾಣಿಸುತ್ತಿತ್ತು ?

26. ಬಸವಣ್ಣನವರು ಜನರ ಧಾರ್ಮಿಕ ನಂಬಿಕೆಗಳನ್ನು ಏಕೆ ಖಂಡಿಸಿದ್ದಾರೆ ?

27. ಅರ್ಜುನನು ಒಡಲು ಒಡೆವಂತೆ ಮನದಲಿ ನಗಲು ಕಾರಣವೇನು ?

28. ಹಾವನ್ನು ಕಂಡ ವೈದ್ಯರ ತಲೆಯಲ್ಲಿ ಯಾವ ವಿಚಾರಗಳು ಮೂಡಿಬಂದವು ?

29. ಮನುಕುಲದ ಭವ್ಯ ಬದುಕು ಯಾವ ರೀತಿ ಅರಳಬೇಕಿದೆ ?

30. **ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ :** 1 × 3 = 3

ನೀರ ಕಂಡಲ್ಲಿ ..........................................................

..........................................................................

..........................................................................

............................................... ಕೂಡಲ ಸಂಗಮದೇವ.

***ಅಥವಾ***

ಮರವಿದ್ದು ಫಲವೇನು ನೆರಳಿಲ್ಲದನ್ನಕ್ಕ

..........................................................................

..........................................................................

..........................................................................

..........................................................................

ನಾನಿದ್ದು ಫಲವೇನು ನಿಮ್ಮ ಜ್ಞಾನವಿಲ್ಲದನ್ನಕ್ಕ ಚೆನ್ನಮಲ್ಲಿಕಾರ್ಜುನ.

**ಈ ಕೆಳಗಿನ ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ :** 2 × 3 = 6

31. ಅ.ರಾ. ಮಿತ್ರ

32. ಎಂ. ಗೋಪಾಲಕೃಷ್ಣ ಅಡಿಗ

**ಈ ಕೆಳಗಿನ ಹೇಳಿಕೆಗಳಿಗೆ ಸಂದರ್ಭಸಹಿತ ಸ್ವಾರಸ್ಯವನ್ನು ಬರೆಯಿರಿ :** 4 × 3 = 12

33. "ಅದರ ಈಗಿನ ಅವಸ್ಥೆಯನ್ನು ನಾನು ನೋಡಲಾರೆ."

34. ವ್ಯವಸಾಯ ಇಲ್ಲದಿದ್ದರೆ ದೇಶದ ಆಟವೇ ನಡೆಯದು.

35. ಗೊತ್ತು ಗುರಿಯು ಇಲ್ಲದೆ ಕತ್ತಲಲ್ಲಿ ನಡೆದನು.

36. ಒಂದು ಜೀವನಕೇಕೆ ಹಲವು ಸಾಧ್ಯಗಳು ?

**ಈ ಕೆಳಗಿನ ಪ್ರಶ್ನೆಗಳಿಗೆ ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ :** $2 \times 4 = 8$

37. ಅಂಗಹೀನತೆ ಸಾಧನೆಗೆ ಅಡ್ಡಿಯಾಗದು ಎಂಬ ಮಾತು ಪುಟ್ಟರಾಜರ ಜೀವನದಲ್ಲಿ ಹೇಗೆ ನಿಜವಾಗಿದೆ ಎಂಬುದನ್ನು ವಿವರಿಸಿ.

*ಅಥವಾ*

ಬಾಲಕ ಪುಟ್ಟಯ್ಯ ಹಾರ್ಮೋನಿಯಂ ನುಡಿಸಿದ ಪ್ರಸಂಗವನ್ನು ವಿವರಿಸಿ.

38. ಅರ್ಜುನ ಮತ್ತು ಉತ್ತರ ಈರ್ವರಲ್ಲಿರುವ ನಿಮ್ಮ ಮೆಚ್ಚಿನ ಸ್ವಭಾವಗಳನ್ನು ವಿವರಿಸಿ.

*ಅಥವಾ*

ಅರ್ಜುನ ಮತ್ತು ಉತ್ತರನ ಸಂಭಾಷಣೆಯಲ್ಲಿ ನಿಮ್ಮ ಮೆಚ್ಚಿನ ಅಂಶಗಳನ್ನು ಸ್ವಾರಸ್ಯಕರವಾಗಿ ವಿವರಿಸಿ.

**ಈ ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ :** $4 \times 1 = 4$

'ಚಿಪ್ಕೋ' ಎಂಬುದು ಹಿಂದಿ ಭಾಷೆಯ ಪದ. ಈ ಪದದ ಅರ್ಥ ಅಪ್ಪಿಕೋ, ತಬ್ಬಿಕೋ. 'ಚಿಪ್ಕೋ' ಚಳುವಳಿ ಪ್ರಾರಂಭವಾದದ್ದು 1973 ರಲ್ಲಿ 'ಮಂಡಲ್' ಎಂಬ ಗ್ರಾಮದಲ್ಲಿ. ಮಂಡಲ್ ಗ್ರಾಮದ ಸುತ್ತಮುತ್ತ ಅರಣ್ಯವಿದೆ. ಅರಣ್ಯ ಕಡಿಯಲು ಸರ್ಕಾರ ನಿರ್ಬಂಧ ಹೇರಿತ್ತು. ಆದರೂ ಅಲಹಾಬಾದಿನ ಆಟಿಕೆಗಳ ತಯಾರಕ ಮರಗಳನ್ನು ಕಡಿಯಲು ಅನುಮತಿಯನ್ನು ಪಡೆದು ಕಂಟ್ರಾಕ್ಟರ್‌ನೊಂದಿಗೆ ಬಂದ. ಗ್ರಾಮಸ್ಥರು ವಿರೋಧಿಸಿದರೂ ಕೇಳಲಿಲ್ಲ. ಇದರಿಂದ ಯೋಚಿಸಿದ ಜನ ಒಟ್ಟಾಗಿ ಸೇರಿ ಗುರುತು ಮಾಡಿದ್ದ ಮರಗಳನ್ನೆಲ್ಲ ತಬ್ಬಿಕೊಂಡು ನಿಂತರು. ಮರ ಕತ್ತರಿಸುವ ಮೊದಲು ನಮ್ಮನ್ನು ಕತ್ತರಿಸಿ ಎಂದರು. ಕಂಟ್ರಾಕ್ಟರ್ ಅನಿವಾರ್ಯವಾಗಿ ಹಿಂದಿರುಗಬೇಕಾಯಿತು. ಅವರೇ ಮುಂದೆ 'ರೇನಿ' ಎಂಬ ಹಳ್ಳಿಗೆ ಬಂದರು. ಮರ ಕಡಿಯುವ ಸುದ್ದಿ ತಿಳಿಯುತ್ತಿದ್ದಂತೆ ಗ್ರಾಮದ ಮಹಿಳೆಯರೇ ಮುಂದಾಗಿ ಐವತ್ತು ವರ್ಷದ ಅನಕ್ಷರಸ್ಥ ಮಹಿಳೆ ಗೌರಾದೇವಿಯ ನೇತೃತ್ವದಲ್ಲಿ ಮರ ಕಡಿಯುವುದನ್ನು ತಡೆದರು. 1970 ರಲ್ಲಿ ಅಲಕನಂದಾ ಕಣಿವೆಯ ಪ್ರದೇಶದಲ್ಲಿ ಭೀಕರ ಸ್ವರೂಪದ ಪ್ರವಾಹ ಸಂಭವಿಸಿತ್ತು. ಅರಣ್ಯದ ಮಣ್ಣೆಲ್ಲ ಕೊಚ್ಚಿಕೊಂಡು ಹೋಗಿ ಹೊಳೆ, ಕೆರೆ, ಕಣಿವೆಗಳಲ್ಲಿ ಹೂಳು ತುಂಬಿಕೊಂಡು ಕುಡಿಯುವ ನೀರಿಗೆ ಪರದಾಡುವ ಸ್ಥಿತಿ ನಿರ್ಮಾಣವಾಯಿತು. ಇದಕ್ಕೆಲ್ಲ ಕಾರಣ ಅರಣ್ಯನಾಶವೇ ಎಂಬುದು ಜನಕ್ಕೆ ಅರಿವಾಯಿತು. ಹೀಗೆ ಅರಣ್ಯ ಸಂರಕ್ಷಣೆಯ ಬಗ್ಗೆ ಹಳ್ಳಿಹಳ್ಳಿಗೆ ತೆರಳಿ ಅರಿವು ಮೂಡಿಸಿದ ಜನಪ್ರಿಯ ನಾಯಕ ಸುಂದರಲಾಲ್ ಬಹುಗುಣರವರು.

*ಪ್ರಶ್ನೆಗಳು :*

39. ಮರ ಕಡಿಯಲು ಸರ್ಕಾರದಿಂದ ಅನುಮತಿಯನ್ನು ಪಡೆದವರು ಯಾರು ?

40. ಮರ ಕಡಿಯಲು ಬಂದ ಕಂಟ್ರಾಕ್ಟರ್‌ಗೆ ಗ್ರಾಮಸ್ಥರ ಉತ್ತರವೇನು ?

41. ಅಲಕನಂದಾ ಕಣಿವೆ ಪ್ರದೇಶದಲ್ಲಿ 1970 ರಲ್ಲಿ ಸಂಭವಿಸಿದ ಪ್ರವಾಹದ ಪರಿಣಾಮವೇನು ?

42. ಚಿಪ್ಕೋ ಚಳುವಳಿಯಲ್ಲಿ ಭಾಗವಹಿಸಿದ ಇಬ್ಬರ ಹೆಸರನ್ನು ತಿಳಿಸಿ.

## ವಿಭಾಗ – 'ಬಿ'

### (ಅನ್ವಯಿಕ ವ್ಯಾಕರಣ, ಅಲಂಕಾರ, ಛಂದಸ್ಸು)

**ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ :** 12 × 1 = 12

43. 'ತತ್ಸಮ' ರೂಪದಲ್ಲಿರುವ ಪದ

(ಎ) ಪಕ್ಷಿ (ಬಿ) ಸಿರಿ

(ಸಿ) ಜನುಮ (ಡಿ) ಮಲ್ಲಿಗೆ

44. 'ಬುನಾದಿ' ಪದದ ಅರ್ಥ

(ಎ) ಸೊಕ್ಕು (ಬಿ) ತಳಪಾಯ

(ಸಿ) ತುಡಿತ (ಡಿ) ಅವಸ್ಥೆ

45. 'ಸರ್ವನಾಮ' ಪದಕ್ಕೆ ಉದಾಹರಣೆ

(ಎ) ಗಂಗಾ (ಬಿ) ಅವಳು

(ಸಿ) ವಿಜ್ಞಾನಿ (ಡಿ) ಬೆಟ್ಟ

46. 'ಮೇಲೇಳು' ಪದದಲ್ಲಿರುವ ಸಂಧಿ

(ಎ) ಲೋಪ ಸಂಧಿ (ಬಿ) ಆಗಮ ಸಂಧಿ

(ಸಿ) ಆದೇಶ ಸಂಧಿ (ಡಿ) ಗುಣ ಸಂಧಿ

47. 'ಕ್ರಿಯಾ ಸಮಾಸ'ಕ್ಕೆ ಉದಾಹರಣೆ

(ಎ) ಹೊಸರಾಗ (ಬಿ) ಗಿಡಮರ

(ಸಿ) ಗಂಜಿಯುಂಡು (ಡಿ) ಅರಮನೆ

48. 'ಜೋಡು ನುಡಿಗೆ' ಉದಾಹರಣೆ

(ಎ) ಬನ್ನಿಬನ್ನಿ (ಬಿ) ಕಟ್ಟಕಡೆ

(ಸಿ) ಸಿಹಿಕಹಿ (ಡಿ) ಪಟಪಟ

49. ವಿಜಾತಿಯ ಸಂಯುಕ್ತಾಕ್ಷರ ಪದವಿದು

(ಎ) ಅಮ್ಮ (ಬಿ) ಅಣ್ಣ

(ಸಿ) ಕಣ್ಣು (ಡಿ) ಕಷ್ಟ

50. ಚತುರ್ಥಿ ವಿಭಕ್ತಿ ಪ್ರತ್ಯಯವುಳ್ಳ ಪದ

(ಎ) ಮರವು (ಬಿ) ಮರವನ್ನು

(ಸಿ) ಮರದಿಂದ (ಡಿ) ಮರಕ್ಕೆ

51. ವಿರುದ್ಧಾರ್ಥಕ ರೂಪದಲ್ಲಿರುವ ಪದ

(ಎ) ಅಜ್ಞಾನ (ಬಿ) ಸುರಕ್ಷಿತ

(ಸಿ) ಸಾಧಾರಣ (ಡಿ) ಶಾಶ್ವತ

52. 'ದಿಗ್ವಾಚಕ'ಕ್ಕೆ ಉದಾಹರಣೆಯಾಗಿರುವ ಪದ

(ಎ) ಪಶ್ಚಿಮ (ಬಿ) ಇಬ್ಬರು

(ಸಿ) ಎಂತಹ (ಡಿ) ಬಿಳುಪು

53. ಐದು ಮಾತ್ರೆಗಳಿಂದ ಕೂಡಿರುವ ಪದ

(ಎ) ಗಮಕ (ಬಿ) ಅರಮನೆ

(ಸಿ) ಉತ್ತರ (ಡಿ) ಮಂಡೆಯಲಿ

54. 'ಉಪಮಾಲಂಕಾರ'ಕ್ಕೆ ಉದಾಹರಣೆ

(ಎ) ವನಜಮುಖಿ (ಬಿ) ಬಲಗಡಲು

(ಸಿ) ನಾಡನರಿ (ಡಿ) ಕಮಲದಂತೆ ಮುಖ

## ವಿಭಾಗ – 'ಸಿ'

## (ವಾಕ್ಯರಚನೆ ಹಾಗೂ ಬರೆವಣಿಗೆ ಕೌಶಲ)

55. **ಈ ಕೆಳಗೆ ಕೊಟ್ಟಿರುವ ಗಾದೆಮಾತುಗಳಲ್ಲಿ ಯಾವುದಾದರೂ ಒಂದನ್ನು ಆರಿಸಿಕೊಂಡು, ವಿಸ್ತರಿಸಿ ಬರೆಯಿರಿ :** $1 \times 3 = 3$

* ಆಳಾಗಿ ದುಡಿಯುವವನು ಅರಸನಾಗಬಲ್ಲ
* ಬೆಳೆಯುವ ಸಿರಿ ಮೊಳಕೆಯಲ್ಲಿ
* ದೇಶ ಸುತ್ತಿ ನೋಡು; ಕೋಶ ಓದಿ ನೋಡು

56. ನಿಮ್ಮನ್ನು ಮಂಗಳೂರಿನ ಸಂತಮೇರಿ ಪ್ರೌಢಶಾಲೆಯ 'ಸಹನಾ' ಎಂದು ಭಾವಿಸಿಕೊಂಡು, ಶಾಲಾ ಗ್ರಂಥಾಲಯಕ್ಕೆ ಕನ್ನಡ ಪದಕೋಶ ಗ್ರಂಥವನ್ನು ತರಿಸುವಂತೆ ಕೋರಿ ಮುಖ್ಯೋಪಾಧ್ಯಾಯರಿಗೆ ಒಂದು ಮನವಿ ಪತ್ರ ಬರೆಯಿರಿ. $1 \times 4 = 4$

***ಅಥವಾ***

ನಿಮ್ಮನ್ನು ಬೆಂಗಳೂರಿನ ಬಸವನಗುಡಿಯಲ್ಲಿ ವಾಸವಾಗಿರುವ 'ಶಿವಕುಮಾರ' ಎಂದು ಭಾವಿಸಿಕೊಂಡು, ಗಣೇಶೋತ್ಸವ ಕಾರ್ಯಕ್ರಮಕ್ಕೆ ಆಹ್ವಾನಿಸಿ ದಾವಣಗೆರೆಯ ಬಾಪೂಜಿ ನಗರದಲ್ಲಿ ವಾಸವಿರುವ ರಮೇಶ ಎಂಬ ಹೆಸರಿನ ಗೆಳೆಯನಿಗೆ ಒಂದು ಪತ್ರ ಬರೆಯಿರಿ.

57. **ಈ ಕೆಳಗಿನ ಯಾವುದಾದರೂ ಒಂದು ವಿಷಯವನ್ನು ಕುರಿತು ಪ್ರಬಂಧ ಬರೆಯಿರಿ :** $1 \times 4 = 4$

∗ ಪರಿಸರ ಸಂರಕ್ಷಣೆ

∗ ರಾಷ್ಟ್ರೀಯ ಭಾವೈಕ್ಯತೆ

∗ ಕಂಪ್ಯೂಟರ್